
# ‘ಚಾಂಪಿಯನ್ಸ್’ ಸ್ಫೂರ್ತಿಯ ‘ಸಿತಾರೆ’

ರಾನ್‌ಜೋನ್ಸ್ ಎಂಬ ಬ್ಯಾಸ್ಕೆಟ್‌ಬಾಲ್ ಕೋಚ್ ಒಬ್ಬರು ಅಮೆರಿಕದಲ್ಲಿ ಇದ್ದರು. 1980ರ ದಶಕದಲ್ಲಿ ಅವರು ಮದ್ಯಪಾನ ಮಾಡಿ, ಕಾರು ಓಡಿಸಿದ ಕಾರಣಕ್ಕೆ ಶಿಕ್ಷೆಗೆ ಗುರಿಯಾದರು. ಮಾನಸಿಕ ಸಮಸ್ಯೆ ಇರುವ ಕೆಲವರಿಗೆ ಬ್ಯಾಸ್ಕೆಟ್‌ಬಾಲ್ ತರಬೇತಿ ಕೊಡಬೇಕೆಂಬ ಶಿಕ್ಷೆಯನ್ನು ನ್ಯಾಯಾಲಯ ಅವರಿಗೆ ವಿಧಿಸಿತ್ತು. ‘ಬಿ–ಬಾಲ್: ದಿ ಟೀಮ್ ದಟ್ ನೆವರ್ ಲಾಸ್ಟ್ ಎ ಗೇಮ್’ ಹೆಸರಿನ ಸಣ್ಣಕತೆಯೊಂದನ್ನು ರಾನ್‌ಜೋನ್ಸ್ 1990ರಲ್ಲಿ ಬರೆದರು. ಒಂದು ವರ್ಷದೊಳಗೆ ಅದು ‘ಒನ್ ಸ್ಪೆಷಲ್ ವಿಕ್ಟರಿ’ ಎಂಬ ಶೀರ್ಷಿಕೆ ಹೊತ್ತು ಟೀವಿ ಚಿತ್ರವಾಗಿ ಮೂಡಿಬಂದಿತು. 2018ರಲ್ಲಿ ಈ ಮಾನವೀಯ ಸೆಲೆ ಇರುವ, ಸಾಹಸಗಾಥೆಯು ಸ್ಪೇನ್‌ನಲ್ಲಿ ‘ಚಾಂಪಿಯನ್ಸ್’ ಎಂಬ ಪೂರ್ಣಪ್ರಮಾಣದ ಚಲನಚಿತ್ರವಾಗಿ ತೆರೆಕಂಡಿತು.

ಅಮೀರ್ ಖಾನ್ ‘ಸಿತಾರೆ ಜಮೀನ್ ಪರ್’ ಎಂಬ ಹಿಂದಿ ಚಿತ್ರದ ಟ್ರೈಲರ್ ಅನ್ನು ಮೊನ್ನೆ ಬಿಡುಗಡೆ ಮಾಡಿದರು. ಅದರ ದೃಶ್ಯಗಳು ಬಹುಪಾಲು ‘ಚಾಂಪಿಯನ್ಸ್’ ಸಿನಿಮಾದ ಕಾಪಿಯಂತೆಯೇ ಇವೆ. ‘ಫಾರೆಸ್ಟ್ ಗಂಪ್’ ಸಿನಿಮಾ ರೀಮೇಕ್ ಆಗಿ ‘ಲಾಲ್ ಸಿಂಗ್ ಛಡ್ಡಾ’ ಚಿತ್ರೀಕರಿಸಿ ಸುಮಾರು ₹120 ಕೋಟಿ ರೂಪಾಯಿ ಲುಕ್ಸಾನು ಮಾಡಿಕೊಂಡ ಅಮೀರ್, ಈ ಸಲ ಪ್ರಚಾರದ ಎಲ್ಲ ಸಾಧ್ಯತೆಯತ್ತ ಮುಖಮಾಡಿದ್ದಾರೆ.

ಮುಂಬೈನಲ್ಲಿ ನಡೆದ ಜಾಗತಿಕ ಶ್ರವಣ–ದೃಶ್ಯ ಮನರಂಜನೆ ಶೃಂಗ (ವೇವ್ಸ್) ನಲ್ಲಿ ಅವರು ಎರಡು ದಿನ ಠಿಕಾಣಿ ಹೂಡಿದ್ದರು. ಅಲ್ಲಿಗೆ ಬಂದಿದ್ದ ವಿದೇಶಗಳ ಪ್ರತಿನಿಧಿಗಳೊಟ್ಟಿಗೆ ಮಾತುಕತೆ ಕೂಡ ನಡೆಸಿದರು. ‘ಸಿತಾರೆ ಜಮೀನ್ ಪರ್’ ಮೇ ತಿಂಗಳಲ್ಲಿಯೇ ತೆರೆಗೆ ಬರಲು ಸಿದ್ಧವಾಗಿದ್ದರಿಂದ ಅವರ ಚಲನವಲನದಲ್ಲಿ ಪ್ರಚಾರ ವೈಖರಿಯೊಂದು ಸಹಜವಾಗಿಯೇ ಎದ್ದುಕಂಡಿತು.

‘ಸಿತಾರೆ ಜಮೀನ್ ಪರ್’ ಚಿತ್ರದ ಟ್ರೈಲರ್ ನೋಡಿದವರ ಪ್ರತಿಕ್ರಿಯೆಗಳು ಮಿಶ್ರ ಬಗೆಯಲ್ಲಿ ಇವೆ. ಕೆಲವರು ಇದು ‘ಫಾರೆಸ್ಟ್ ಗಂಪ್’ನಷ್ಟು ಜನಪ್ರಿಯ ಚಿತ್ರದ ರೀಮೇಕ್ ಆಗಿಲ್ಲವಾದುದರಿಂದ ಜನರು ನೋಡಿರುವ ಸಾಧ್ಯತೆ ಕಡಿಮೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಕೆಲವರು, ‘ಬೇರೆ ಸಿನಿಮಾಗಳಿಂದ ಎತ್ತುವುದರಲ್ಲಿ ಮಿಸ್ಟರ್ ಪರ್ಫೆಕ್ಟ್ ಆಗಿಬಿಟ್ಟಿರುವ ಅಮೀರ್ ಖಾನ್’ ಎಂಬರ್ಥದಲ್ಲಿ ಟೀಕಾಪ್ರಹಾರವನ್ನೂ ಮಾಡಿದ್ದಾರೆ.



ಈ ಸಿನಿಮಾದಲ್ಲಿ ಅಮೀರ್ ಖಾನ್ ಅವರು ಬ್ಯಾಸ್ಕೆಟ್‌ಬಾಲ್ ಕೋಚ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕ್ರೀಡಾಸ್ಫೂರ್ತಿ ಇರುವ ಸಿನಿಮಾಗಳು ಅವರಿಗೆ ಈ ಹಿಂದೆ ಗೆಲುವು ತಂದಿತ್ತಿರುವುದರಿಂದ, ಇದನ್ನು ಅನುಕೂಲಕರ ನಡೆ ಎಂದೇ ಭಾವಿಸಬಹುದು. ■

# ರಿತೇಶ್ ಶಿವಾಜಿ ಪ್ರೀತಿ



ನಟ ರಿತೇಶ್ ದೇಶಮುಖ್ ಮತ್ತೆ ಸುದ್ದಿಯಲ್ಲಿದ್ದಾರೆ. ‘ರೇಡ್ 2’ ಹಿಂದಿ ಸಿನಿಮಾದಲ್ಲಿ ಅವರು ಖಳನ ಪಾತ್ರದಲ್ಲಿ ಮಿಂಚಿದ್ದಾರೆ. ಅಜಯ್ ದೇವಗನ್ ಐಆರ್‌ಎಸ್ ಅಧಿಕಾರಿ ಪಾತ್ರದಲ್ಲಿ ನಟಿಸಿರುವ ಸಿನಿಮಾದಲ್ಲಿ ರಿತೇಶ್ ಖಳ. ಆ ಪಾತ್ರಕ್ಕೆ ಅವರು ಜೀವ ತುಂಬಿರುವುದನ್ನು ಅನೇಕ ವಿಮರ್ಶಕರು ಶ್ಲಾಘಿಸಿದ್ದಾರೆ. ರಿತೇಶ್ ಒಳಗೆ ಇಂತಹ ಒಬ್ಬ ನಟನಿದ್ದ ಎನ್ನುವುದು ಹೊರಗೆ ಬರಲು ಇಷ್ಟು ವರ್ಷಗಳು ಬೇಕಾದವು ಎಂದು ಮುಕ್ತಕಂಠದಿಂದ ಹೊಗಳಿದ್ದಾರೆ.

ಅದು ಪೀಠಿಕೆ ಆಯಿತು. ಸದ್ಯಕ್ಕೆ ಅವರು ಇನ್ನೊಂದು ಸುದ್ದಿಯನ್ನು ತೇಲಿಬಿಟ್ಟಿದ್ದಾರೆ. ‘ಶಿವಾಜಿ ಮಹಾರಾಜ್’ ಸಿನಿಮಾಗೆ ಒಂದು ಲೋಗೊ ಮಾಡಿಕೊಡುವಂತೆ ಅವರು ಸ್ಪರ್ಧೆಯನ್ನು ಆಯೋಜಿಸಿದ್ದಾರೆ. ಯುವ ಮನಸ್ಸುಗಳು ಅಂತಹ ಲೋಗೊ ಮಾಡಿಕೊಟ್ಟರೆ, ಆ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳುವುದು ಅವರ ಉದ್ದೇಶ.

ಶಿವಾಜಿ ಕುರಿತ ಚಿತ್ರವನ್ನು ತಮ್ಮದೇ ಬ್ಯಾನರ್‌ನಲ್ಲಿ ಅವರು ನಿರ್ಮಿಸುತ್ತಿದ್ದಾರೆ. ಜಿಯೊ ಸಿನಿಮಾಸ್ ನಿರ್ಮಾಣ ಸಂಸ್ಥೆ ಈ ಯೋಜನೆಗೆ ಕೈ ಜೋಡಿಸಿದೆ.

ಕಳೆದ ವರ್ಷದ ಪ್ರಾರಂಭದಲ್ಲೇ ಅವರು ಶಿವಾಜಿ ಚಿತ್ರವನ್ನು ಮರಾಠಿ, ಹಿಂದಿ ಎರಡೂ ಭಾಷೆಗಳಲ್ಲಿ ತಯಾರಿಸುವುದಾಗಿ ಪ್ರಕಟಿಸಿದ್ದರು. ನಡುವೆ ಚಿತ್ರೀಕರಣ ಅಂದುಕೊಂಡ ದಿನ ಶುರುವಾಗಲಿಲ್ಲ. ಈಗ ಮತ್ತೆ ಆ ಕನಸಿಗೆ ರೆಕ್ಕೆಪುಕ್ಕ ಹಚ್ಚಿದ್ದಾರೆ. ಸದ್ಯಕ್ಕೆ ಮಹಾರಾಷ್ಟ್ರದಲ್ಲಿ ಔರಂಗಾಜೇಬ್ ಕುರಿತು ಕೆಲವು ಸಮುದಾಯಗಳಲ್ಲಿ ದ್ವೇಷ ಎದ್ದುಕಾಣುತ್ತಿದೆ. ಇದೇ ತಮ್ಮ ಚಿತ್ರಕ್ಕೆ ವರವಾದೀತು ಎನ್ನುವುದು ಅವರ ಲೆಕ್ಕಾಚಾರ ಆಗಿರಬಹುದು. ಶಿವಾಜಿ ಪಾತ್ರದಲ್ಲಿ ಖುದ್ದು ರಿತೇಶ್ ದೇಶಮುಖ್ ಅಭಿನಯಿಸುವರು. ■